೫) ಶೀರ್ಷಿಕೆ ೨೭೦೧ರ ಅಡಿಯಲ್ಲಿ ಕೆಳಕಂಡಂತೆ ಒದಗಿಸಲಾಗಿದೆ.

೧. ಬದ್ರಾ ಯೋಜನೆಗೆ ೧೨೧.೦೧ ಲಕ್ಷ ರೂ.ಗಳು

೨. ಗೊಂದಿ ಅಣೆಕಟ್ಟೆಗೆ ೫.೧೪ ಲಕ್ಷ ರೂ.ಗಳು

ಕ.ರಾ.ರ.ಸಾ. ಸಂಸ್ಥೆಯು ೩ ವರ್ಷಗಳಲ್ಲಿ ಖರೀದಿಸಿದ ಛಾಸಿ, ಟೈರ್‌ಗಳು, ಟ್ಯೂಬ್, ಫ್ಲಾಪ್ ಮತ್ತು ಬಿಡಿಭಾಗಗಳು

೫೬೪. ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಳೆದ ಮೂರು ವರ್ಷಗಳಲ್ಲಿ ಕ.ರಾ.ರ.ಸಾ. ಸಂಸ್ಥೆಯು ಖರೀದಿಸಿದ ಛಾಸಿ, ಟೈರು, ಟ್ಯೂಬ್, ಫ್ಲಾಪ್ ಮತ್ತು ಇತರ ಬಿಡಿಭಾಗಗಳ ಹಣದ ಮೊತ್ತ ?

ಆ) ಇವುಗಳನ್ನು ಖರೀದಿಸಲು ಟೆಂಡರು ಕರೆದಿರುತ್ತದೆಯೇ ?

ಇ) ಮೇಲೆ ಕಾಣಿಸಿದ ಸರಬರಾಜು ಮಾಡುವ ತಯಾರಕರ ಹೆಸರುಗಳು

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು)

ಅ) ಕಳೆದ ಮೂರು ವರ್ಷಗಳಲ್ಲಿ ಛಾಸಿ, ಟೈರು, ಟ್ಯೂಬ್ ಮುಂತಾದ ಸರಕುಗಳನ್ನು ಖರೀದಿಸಲು ಖರ್ಚು ಮಾಡಿರುವ ಹಣದ ಮೊತ್ತವು ಈ ಕೆಳಕಂಡಂತಿವೆ.

ಸರಕುಗಳ ವಿವರ	ಖರ್ಚು ಮಾಡಿರುವ ಹಣದ ವಿವರ (ಲಕ್ಷ ರೂ. ಗಳಲ್ಲಿ)		
	೧೯೮೭–೮೮	೧೯೮೮–೮೯	೧೯೮೯–೯೦
ಛಾಸಿ	೨೭೪೬–೨೮	೨೯೦೮–೦೫	೨೪೬೫–೦೦
ಟೈರು, ಟ್ಯೂಬು ಮತ್ತು ಫ್ಲಾಪ್‌ಗಳು	೨೫೭೭–೭೫	೨೮೬೮–೬೬	೨೭೨೬–೦೦
ಬಿಡಿಭಾಗಗಳು	೧೧೦೫–೪೧	೧೫೪೪–೨೭	೧೬೪೪–೪೫
ಇತರೆ ಬಳಕೆ ವಸ್ತುಗಳು	೧೦೬೪–೨೬	೧೨೯೩–೧೮	೧೨೧೨–೦೦
	೭೪೯೩–೭೦	೮೬೧೯–೧೬	೮೦೪೭–೪೫

ಆ) ಟೆಂಡರುಗಳನ್ನು ಕರೆಯಬೇಕೆ ಅಥವಾ ಬೇಡವೇ ಎಂಬುದು ಖರೀದಿ ಮಾಡುವ ಸಾಮಾನುಗಳ ಮೇಲೆ ಅವಲಂಬಿಸಿರುವುದು.

ಇವುಗಳ ಖರೀದಿಯಲ್ಲಿ ಮೂರು ತರಹಗಳಿವೆ.—

೧) ಮೂಲ ಒಡೆತನದ ಬಿಡಿಭಾಗಗಳು.—ಇವುಗಳನ್ನು ಮೂಲ ತಯಾರಕರಿಂದ ಅಂದರೆ ಅಶೋಕ ಲೇಲ್ಯಾಂಡ್, ಟಾಟಾ, ಲೂಕಾಸ್, ಟಿ.ವಿ.ಎಸ್., ಮೈಕೋ, ಬ್ರೇಕ್ಸ್ ಇಂಡಿಯಾ, ಆಟೋ ಮೊಬೈಲ್ ಪ್ರಾಡಕ್ಟ್ಸ್ ಆಫ್ ಇಂಡಿಯಾ ಮುಂತಾದವರುಗಳಿಂದ ಖರೀದಿಸಲಾಗುವುದು.

೨) ದರ ಸಂವಿದದಲ್ಲಿರುವ ಬಿಡಿಭಾಗಗಳು.—ಇವುಗಳಿಗೆ ಕೇಂದ್ರ ಬಾಹ್ಯ ಸಾರಿಗೆ ಇಲಾಖೆ ಪತಿಯ ಸ್ವಾಯತ್ತ ಸಂಸ್ಥೆಯಾದ ಎ.ಎಸ್.ಆರ್.ಟಿ.ಯು, ನ್ಯೂಡೆಲ್ಲಿಯವರಂ ದರಸಂವಿದೆಗಳನ್ನು ನಿರ್ಧರಿಸುವರು. ಸರಕುಗಳನ್ನು ಬೆಲೆಗಳ ಹೋಲಿಕೆಯಾದ ಮೇಲೆ ತಾಂತ್ರಿಕ ಪರಿಪೂರ್ಣತೆಯಿರುವ ವಸ್ತುಗಳ ತಯಾರಕರಿಂದ ಖರೀದಿಸಲಾಗುವುದು.

೩) ಹಲ ಕೆಲವು ಸರಕುಗಳನ್ನು ಕ.ರಾ.ರ.ಸಾ. ಸಂಸ್ಥೆಯಿಂದ ಪೋಷಿತ : ಪೂರಕ ಕೈಗಾರಿಕೆಗಳಿಂದಲೂ, ಕರ್ನಾಟಕ ಸಣ್ಣ ಕೈಗಾರಿಕಾ ಘಟಕಗಳಿಂದಲೂ, ದರಸಂವಿದದಲ್ಲಿರುವ ಬೆಲೆಗಳನ್ನು ತುಲನೆಮಾಡಿ ಖರೀದಿಸಲಾಗುವುದು.

೪) ಟೆಂಡರು ಸರಕುಗಳನ್ನು ನೊಂದಾಯಿಸಿದ ಸರಬರಾಜುದಾರರಿಂದ ಮತ್ತು ಗೊತ್ತಿರುವ ತಯಾರಕರಿಂದ ಟೆಂಡರುಗಳ ಮೂಲಕ ಖರೀದಿಸಲಾಗುವುದು.

ಇ) ವಿವರವು ಕೆಳಕಂಡಂತಿದೆ.

ಸರಕುಗಳ ವಿವರ		ಸರಕುಗಳನ್ನು ಕೊಂಡ ಫರ್ಮುಗಳ ಹೆಸರು
೧. ಛಾಸಿ	೧) ಅಶೋಕ್ ಲೇಲ್ಯಾಂಡ್	
	೨) ಟಲ್ಕೊ	
೨. ಟೈರು, ಟ್ಯೂಬ್, ಫ್ಲಾಪ್‌ಗಳು	೧) ಅಪೋಲೋ ಟೈರ್ಸ್	
	೨) ಬಾಂಬೆ ಟೈರ್ಸ್	
	೩) ಸೀಟ್ ಟೈರ್ಸ್	
	೪) ಡನ್‌ಲಪ್	
	೫) ಗುಡ್ ಇಯರ್	ತಯಾರಕರು
	೬) ಜೆ. ಕೆ. ಇಂಡಸ್ಟ್ರೀಸ್	
	೭) ಎಂ. ಆರ್. ಎಫ್. ಟೈರ್ಸ್	
	೮) ಮೋದಿ	
	೯) ಪ್ರೀಮಿಯರ್	
	೧೦) ಟಿ. ಸಿ. ಪಿ.	
	೧೧) ವಿಕ್ರಾಂತ್ ಟೈರ್ಸ್	
	೧೨) ವೇರ್‌ವೆಲ್	
೩. ಟ್ಯೂಬುಗಳು	೧) ಅಗರ್‌ವಾಲ್ ಹೈದರಾಬಾದ್	ಆರ್. ಬಿ.
	೨) ಮಧುರ, ಮಂಗಳೂರು	ಎಸ್.ಎಸ್.ಐ ಕರ್ನಾಟಕ
	೩) ರಂಗನಾಥ್, ಮದ್ರಾಸ್	ಟೆಂಡರುದಾರರು
	೪) ಬಿ. ಕೆ. ರಬ್ಬರ್ ಇಂಡೂರ್	ಟೆಂಡರುದಾರರು
	೫) ಸನ್‌ಫ್ಲೈನ್, ಮಂಗಳೂರು	ಎಸ್.ಎಸ್.ಐ. ಕರ್ನಾಟಕ
	೬) ಬೆಂಗಳೂರು ಟ್ಯೂಬ್ಸ್	ಟೆಂಡರುದಾರರು
	೭) ದ್ಯೂರೊ ಪಾಲಿಮೆನ್ ಕಲ್ಕತ್ತ	ಟೆಂಡರುದಾರರು
	೮) ಎಸ್. ಕುಮಾರ್, ಬೆಂಗಳೂರು	ಟೆಂಡರುದಾರರು
೪. ಬಿಡಿ ಭಾಗಗಳು	ಈ ಸರಕುಗಳನ್ನು ತಯಾರಕರಿಂದ ಸರಬರಾಜುದಾರರಿಂದ ಅಂದರೆ ನಿರ್ಧರಿಸಿದ ಮೂಲಗಳಿಂದ ಒಡೆತನ, ಮತ್ತು ಆಧೀನ ಕೈಗಾರಿಕೆಗಳಿಂದ ಖರೀದಿಸಲಾಗುವುದು.	

ಬೆಂಗಳೂರು ಬಸ್ ನಿಲ್ದಾಣದಲ್ಲಿರುವ ಉಪಹಾರ ಗೃಹವು ಶುಚಿಯಾಗಿಲ್ಲದಿರುವ ಬಗ್ಗೆ

೫೫೩. ಶ್ರೀ ಪೆರಿಕಾಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬೆಂಗಳೂರು ಬಸ್ ನಿಲ್ದಾಣದಲ್ಲಿ ಉಪಹಾರ ಗೃಹ ಇದೆಯೇ ?

ಆ) ಹಾಗಿದ್ದರೆ, ಈ ಉಪಹಾರ ಗೃಹವನ್ನು ಆರೋಗ್ಯದ ದೃಷ್ಟಿಯಿಂದ ಶುಚಿಯಾಗಿಟ್ಟಿಲ್ಲ ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪ್ರಾಧಿಕಾರಿಗಳು ಮೇಲ್ಕಂಡ ಉಪಹಾರ ಗೃಹಕ್ಕೆ ಭೇಟಿ ನೀಡಿದ್ದಾರೆಯೇ ?

ಈ) ಹಾಗಿದ್ದಲ್ಲಿ, ಎಷ್ಟು ಸಾರಿ ಭೇಟಿ ನೀಡಿದ್ದಾರೆ ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಸಚಿವರು).—

ಅ) ಇದೆ.

ಆ) ಬಂದಿದೆ.

ಇ) ನೀಡಿದ್ದಾರೆ.

ಈ) ಆಗಿಂದಾಗ್ಗೆ